ಕರ್ನಾಟಕಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/30/2013-14. ದಿನಾಂಕ:29-08-2016.

| ವಾದಿಗಳು | ಪ್ರತಿವಾದಿಗಳು |
|---|---|
| ಟಿ.ಎಂ.ತಿಪ್ಪೇಸ್ವಾಮಿ ತಂದೆ ಲೇಟ್ ಟಿ.ಎಂ. ಮರುಳಯ್ಯ<br>ಶಾಂತನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | ಎಸ್.ಮಂಜುನಾಥ ತಂದೆ ಲೇಟ್ ಎಂ.ಬಸಪ್ಪ.<br>ಶಾಂತನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಹಾರಕಬಾವಿ ಗ್ರಾಮದ ಸನಂ 568ಎ. ವಿಸ್ತೀರ್ಣ 0-61 ಸೆಂಟ್ಸು. ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಹಾರಕಬಾವಿ ಗ್ರಾಮದ ಸನಂ 568ಎ. ವಿಸ್ತೀರ್ಣ 0-61 ಸೆಂಟ್ಸು. ಜಮೀನನ್ನು ಸದರಿ ತಾಲೂಕು ಶಾಂತನಹಳ್ಳಿ ಗ್ರಾಮದ ಟಿ.ಎಂ.ತಿಪ್ಪೇಸ್ವಾಮಿ ತಂದೆ ಲೇಟ್ ಟಿ.ಎಂ.ಮರುಳಯ್ಯ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಹಾರಕಬಾವಿ ಇವರು ನಮೂನೆ-21 ನೋಟಿಸನ್ನು ದಿನಾಂಕ 21-06-2009. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಶಾಂತನಹಳ್ಳಿ ಎಸ್.ಎಂ.ಮಂಜುನಾಥ ತಂದೆ ಎಂ.ಬಸಪ್ಪ. ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್:11/2009-10. ದಿನಾಂಕ 08-09-2009. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 28-11-2013 ರಿಂದ 29-08-2016 ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಹಾರಕಬಾವಿ ಗ್ರಾಮದ ಸನಂ 568ಎ. ವಿಸ್ತೀರ್ಣ 0-61 ಸೆಂಟ್ಸು. ಜಮೀನು ನಮ್ಮ ತಂದೆಯವರಾದ ಟಿ.ಎಂ.ಮರುಳಯ್ಯ ತಂದೆ ಚನ್ನಯ್ಯ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 14-06-1985 ರಂದು ಹಾಗೂ ನಮ್ಮ ತಾಯಿಯವರಾದ ತಿಪ್ಪಮ್ಮ ಗಂಡ ಮರುಳಯ್ಯ ಇವರು ದಿನಾಂಕ 18-05-1970 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನಿನ ಬಗ್ಗೆ ಉಭಯರು ರಾಜಿಯಾಗಿ ಸದರಿ ಜಮೀನನ್ನು ಮಂಜುನಾಥನಿಗೆ ಬಿಟ್ಟು ಕೊಡಲು ಹಿರಿಯರು ತೀರ್ಮಾನ ಮಾಡಿರುತ್ತಾರೆ. ಈ ಜಮೀನಿನ ಬದಲಾಗಿ ಸರ್ವೆ ನಂಬರ್:493/1. 495/1. ವಿಸ್ತೀರ್ಣ 1-10. 1-10. ಒಟ್ಟು ವಿಸ್ತೀರ್ಣ 2-20 ರಲ್ಲಿ 0-41 ಸೆಂಟ್ಸು ಜಮೀನನ್ನು ಟಿ.ಎಂ.ತಿಪ್ಪೇಸ್ವಾಮಿ ತಂದೆ ಲೇಟ್ ಟಿ.ಎಂ.ಮರುಳಯ್ಯ ಇವರಿಗೆ ಕೊಡಲು ಹಿರಿಯರು ತಿರ್ಮಾನ ಮಾಡಿರುತ್ತಾರೆ. ಪೋತಿವಾರಸು ಪ್ರಕಾರ ಟಿ.ಎಂ.ತಿಪ್ಪೇಸ್ವಾಮಿ ತಂದೆ ಲೇಟ್ ಟಿ.ಎಂ.ಮರುಳಯ್ಯ. ಇವರ ಹೆಸರಿಗೆ ಖಾತಾ ಬದಲಾವಣೆ ಮಾಡಿಸಿ ಕೊಂಡ ನಂತರ ಸರ್ವೆ ನಂಬರ್: 568ಎ. ವಿಸ್ತೀರ್ಣ 0-61 ಸೆಂಟ್ಸು ಜಮೀನನ್ನು ಮಂಜುನಾಥನಿಗೆ ಮತ್ತು ಸರ್ವೆ ನಂಬರ್ 493/1. 495/1. ವಿಸ್ತೀರ್ಣ 1-10. 1-10. ರಲ್ಲಿ ಈ ಜಮೀನುಗಳ ಒಟ್ಟು ವಿಸ್ತೀರ್ಣ 2-20 ರಲ್ಲಿ 0-41 ಸೆಂಟ್ಸು ಜಮೀನನ್ನು ಟಿ.ಎಂ.ತಿಪ್ಪೇಸ್ವಾಮಿ ತಂದೆ ಲೇಟ್ ಟಿ.ಎಂ.ಮರುಳಯ್ಯ ಇವರಿಗೆ ನೊಂದಣಿ ಮಾಡಿ ಕೊಡಲು ಒಪ್ಪಿ ಸಾಕ್ಷಿದಾರರ ಸಮಕ್ಷಮ ಮಾಡಿ ಕೊಂಡ ಒಡಂಬಡಿಕೆ ಕರಾರು ಪತ್ರವನ್ನು ಹಾಜರುಪಡಿಸಿರುತ್ತಾರೆ.

ಮು.ತಿ.ನೊ-2

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆ ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ಉಭಯರು ರಾಜಿಯಾಗಿ ಮಾಡಿ ಕೊಂಡ ಒಡಂಬಡಿಕೆಯ ಒಪ್ಪಿಗೆಯ ಕರಾರು ಪತ್ರ ಪ್ರಕಾರ ಹಾಗೂ ಅರ್ಜಿದಾರರ ಕೋರಿಕೆಯನ್ವಯ ಪೋತಿವಾರಸು ಪ್ರಕಾರ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಹಾರಕಬಾವಿ ಗ್ರಾಮದ ಸನಂ 568ಎ. ವಿಸ್ತೀರ್ಣ 0-61 ಸೆಂಟ್ಸು. ಜಮೀನನ್ನು ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರಾದ ಟಿ.ಎಂ.ತಿಪ್ಪೇಸ್ವಾಮಿ ತಂದೆ ಲೇಟ್ ಟಿ.ಎಂ.ಮರುಳಯ್ಯ ಶಾಂತನಹಳ್ಳಿ ಗ್ರಾಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 29-08-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಚೇರಿ ಹೊಸಹಳ್ಳಿ
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಟಿ.ಎಂ.ತಿಪ್ಪೇಸ್ವಾಮಿ ತಂದೆ ಲೇಟ್ ಟಿ.ಎಂ.ಮರುಳಯ್ಯ ಶಾಂತನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಎಸ್.ಎಂ.ಮಂಜುನಾಥ ತಂದೆ ಲೇಟ್ ಎಂ.ಬಸಪ್ಪ ಶಾಂತನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.